ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/04/ಎಯುಡಿ/2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:19.01.2013

## ಸುತ್ತೋಲೆ

ವಿಷಯ: ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಮಹಾಲೇಖಪಾಲರ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣಾ ಕಂಡಿಕೆಗಳನ್ನು ಅಡ್‌ಹಾಕ್ ಸಭೆಯಲ್ಲಿ ಇತ್ಯರ್ಥಗೊಳಿಸುವ ಬಗ್ಗೆ.

*****

ಜಿಲ್ಲಾ ಪಂಚಾಯತ್‌ಗಳಲ್ಲಿ ಧೀರ್ಘ ಕಾಲದಿಂದ (1994-95 ನೇ ಸಾಲು) ಬಾಕಿ ಉಳಿದಿರುವ ಕಂಡಿಕೆಗಳ ಬಗ್ಗೆ ಕಾಗದ ಪತ್ರಗಳ ಶಾಸಕಾಂಗ ಸಮಿತಿಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ. ಆದ್ದರಿಂದ ಜಿಲ್ಲಾ ಪಂಚಾಯತ್ ಕಛೇರಿ ಹಾಗೂ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಬಾಕಿ ಉಳಿದಿರುವ ಎಲ್ಲಾ ಆಕ್ಷೇಪಣೆಗಳು/ಕಂಡಿಕೆಗಳಿಗೆ ಸಮರ್ಪಕ ಉತ್ತರಗಳನ್ನು ಸಿದ್ಧಪಡಿಸಿ ಪ್ರತಿ ವರ್ಷ ತಪ್ಪದೇ ಅಡ್‌ಹಾಕ್ ಸಮಿತಿ ಸಭೆಗಳನ್ನು ನಡೆಸತಕ್ಕದ್ದು. ಈ ಕುರಿತು ಕ್ರಮ ಕೈಗೊಳ್ಳಲು ಈ ಕೆಳಕಂಡಂತೆ ಕಾಲಮಿತಿ ನಿಗಧಿಪಡಿಸಿದೆ.

| | | |
|---|---|---|
| ಏಪ್ರಿಲ್ | 1. | ಬಾಕಿಯಿರುವ ಕಂಡಿಕೆಗಳ ವಿವರಗಳನ್ನು ಮತ್ತು ಅವುಗಳಿಗೆ ಅನುಸರಣಾ ವರದಿಯನ್ನು ಇಲಾಖೆಗಳಿಂದ ಪಡೆದುಕೊಳ್ಳುವುದು. |
| ಮೇ: | 2. | ದಿನಾಂಕ:01 ರಿಂದ 15 ರೊಳಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ದ ಇಲಾಖೆ/ಕಛೇರಿಗಳು ಸಭೆ ನಡೆಸಿ ಅನುಸರಣಾ ವರದಿ ಕುರಿತು ಚರ್ಚಿಸುವುದು |
| | 3. | ದಿನಾಂಕ:16 ರಿಂದ 31 ರೊಳಗೆ ಎರಡನೇ ಹಂತದ ಸಭೆ ನಡೆಸಿ ಅನುಸರಣಾ ವರದಿಗಳನ್ನು ಅಂತಿಮಗೊಳಿಸುವುದು. |
| ಜೂನ್ | 4. | ದಿನಾಂಕ:01 ರಿಂದ 15 ರೊಳಗೆ ಉಳಿದ ಇಲಾಖೆ/ಕಛೇರಿಗಳ ಸಭೆ ನಡೆಸಿ ಅನುಸರಣಾ ವರದಿಗಳನ್ನು ಅಂತಿಮಗೊಳಿಸುವುದು. |
| | 5. | ದಿನಾಂಕ:16 ರಿಂದ 31 ರೊಳಗೆ ಎರಡನೇ ಹಂತದ ಸಭೆ ನಡೆಸಿ ಅನುಸರಣಾ ವರದಿಗಳನ್ನು ಅಂತಿಮಗೊಳಿಸುವುದು. |
| ಜುಲೈ | 6. | ಅಡ್‌ಹಾಕ್ ಸಮಿತಿ ನಡೆಸಲು ದಿನಾಂಕ ನಿಗಧಿಪಡಿಸಿ ಮಹಾಲೇಖಪಾಲರಿಗೆ ತಿಳಿಸುವುದು. ಈ ರೀತಿ ದಿನಾಂಕ ನಿಗಧಿಪಡಿಸುವಾಗ ಜಿಲ್ಲಾ ಪಂಚಾಯತ್‌ನ ವಿವಿಧ ಸಭೆಗಳನ್ನು ಗಮನದಲ್ಲಿರಿಸಿಕೊಂಡು ಕ್ರಮ ವಹಿಸುವುದು. |
| ಆಗಸ್ಟ್ to ಫೆಬ್ರವರಿ | 7. | ಮಹಾಲೇಖಪಾಲರ ಕಛೇರಿಯೊಂದಿಗೆ ಸಮಾಲೋಚಿಸಿ ಅಡ್‌ಹಾಕ್ ಸಮಿತಿ ಸಭೆ ನಡೆಸಿ ಕಂಡಿಕೆಗಳ ತೀರುವಳಿ ಮಾಡಿಸತಕ್ಕದ್ದು. |
| ಮಾರ್ಚ್ | 8. | ತೀರುವಳಿ ಕುರಿತು ಸರ್ಕಾರಕ್ಕೆ ವರದಿ ನೀಡುವುದು. |

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಕಲಂ 263 ರಂತೆ ಕ್ರಮ ವಹಿಸಲು ಹಾಗೂ ಕರ್ನಾಟಕ ಜಿಲ್ಲಾ ಪಂಚಾಯತ್‌ಗಳ (ಹಣಕಾಸು ಮತ್ತು ಲೆಕ್ಕಗಳ) ನಿಯಮಗಳು, 1996 ರ ನಿಯಮ 63(3) ರಂತೆ ಎಲ್ಲಾ ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ತೃಪ್ತಿಕರವಾಗಿ ಮತ್ತು ತ್ವರಿತವಾಗಿ ಇತ್ಯರ್ಥಪಡಿಸುವಂತೆ ನೋಡಿಕೊಳ್ಳುವ ಅಂತಿಮ ಹೊಣೆಗಾರಿಕೆಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲಿರುತ್ತದೆ. ಅದೇ ರೀತಿ ನಿಯಮ (64) ರಂತೆ ಜಿಲ್ಲಾ ಪಂಚಾಯತ್, ಮುಖ್ಯ ಲೆಕ್ಕಾಧಿಕಾರಿಗಳು ಸಹಾ ಜವಾಬ್ದಾರರಾಗಿರುತ್ತಾರೆ.

ಆದ್ದರಿಂದ ಈ ಮೇಲ್ಕಂಡಂತೆ ಕ್ರಮ ಕೈಗೊಂಡು ಮಹಾಲೇಖಪಾಲರ ಆಕ್ಷೇಪಣೆಗಳ ಮೇಲೆ ಅನುಸರಣಾ ವರದಿ ನೀಡಿ ಕಂಡಿಕೆಗಳನ್ನು ತೀರುವಳಿಗೊಳಿಸಲು ಕಾಲಮಿತಿಯಲ್ಲಿ ಕಾರ್ಯನಿರ್ವಹಿಸಲು ಸೂಚಿಸಿದೆ.

(ಎ. ರಶ್ಮಿ)
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಪ್ರತಿಯನ್ನು :-

1. ಕಾರ್ಯದರ್ಶಿಗಳು, ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು
2. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
3. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು